ಪಿಸಿ ನಂ.78/2026, ಪಿಡಬ್ಲ್ಯೂ: 01
ದಿನಾಂಕ: 16-06-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಸಾಕ್ಷಿಯ ಸ್ವ ಪ್ರಮಾಣೀಕೃತ ಹೇಳಿಕೆ:**

ಈ ಪ್ರಕರಣದಲ್ಲಿ ನಾನು ಪಿರ್ಯಾದಿದಾರನಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಪ್ರತಿಜ್ಞಾ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲಾ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ಈ ಕೆಳಕಂಡ ದಾಖಲಾತಿಗಳನ್ನು ನಾನು ಹಾಜರುಪಡಿಸಿರುತ್ತೇನೆ.

ಆರೋಪಿಯು ನೀಡಿದ ಚಕ್ಕನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ- 1 ಎಂದು, ಆರೋಪಿಯ ಸಹಿಯನ್ನು ನಿಪಿ-1(ಎ)ಎಂದು, ಬ್ಯಾಂಕಿನವರು ನೀಡಿದ ಹಿಂಬರಹವನ್ನು ನಿಪಿ- 2 ಎಂದು, ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-3 ಎಂದು, ಅಂಚೆ ರಶೀದಿಯನ್ನು ನಿಪಿ-4 ಎಂದು, address left ಎಂಬ ಹಿಂಬರಹದೊಂದಿಗೆ ಬಂದ ಕವರನ್ನು ನಿಪಿ-5 ಎಂದು ಅದರಲ್ಲಿ ಇದ್ದ ನೋಟಿಸ್ಸನ್ನು ನಿಪಿ- 5(ಎ) ಎಂದು ಗುರುತಿಸಲಾಯಿತು.

ಆರೋಪಿಯ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಲು ವಿನಂತಿ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

Complainant is present and sworn statement affidavit filed, examined as PW1 and got marked Ex.P-1 to Ex.P-5(a).

Heard. For Orders.

Call on 01-07-2026.

CJ and JMFC, Savanur

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.**

ಪಿ ಸಿ ಸಂಖ್ಯೆಃ 93/2025

ಸಿಡಬ್ಲ್ಯೂ : 01

ದಿನಾಂಕಃ 03-09-2025

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ನಿಂಗವ್ವ ಬೆಂಚಿಹಳ್ಳಿ |
| ಗಂಡನ ಹೆಸರು | - | ಹನಮಂತಪ್ಪ ಬೆಂಚಿಹಳ್ಳಿ |
| ವಯಸ್ಸು | - | 28 ವರ್ಷಗಳು |
| ಉದ್ಯೋಗ | - | ಕೂಲಿ ಕೆಲಸ |
| ವಾಸ ಸ್ಥಳ | - | ಇಚ್ಚಂಗಿ |

**ಸಾಕ್ಷಿಯ ಸ್ವ ಪ್ರಮಾಣೀಕೃತ ಹೇಳಿಕೆಃ**

ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ತಂಗಿ ಇರುತ್ತೇವೆ. ನಮ್ಮ ಮನೆಯು ಬೈರಾಪೂರ ರಸ್ತೆಯ ಬಾಜುವಿನಲ್ಲಿ ಇದೆ. ದಿಃ 07-05-2025 ರಂದು ಬೆಳಿಗ್ಗೆ 8 ಗಂಟೆ ಸುಮಾರಿಗೆ ಸುಶೀಲಮ್ಮ ಮತ್ತು ನಮ್ಮ ನಡುವೆ 3 ಅಡಿ ಜಾಗ ಇರುತ್ತದೆ. ಆ ಜಾಗದಲ್ಲಿ ಇರುವ ಚಿಕ್ಕ ಗೋಡೆಯನ್ನು ಕೆಡವಲು ಬಂದಿದ್ದರು. ಆಗ ನಮ್ಮ ಗಂಡ ಕೆಲಸಕ್ಕೆ ಹೋಗಿದ್ದರು. ಸುಶೀಲಮ್ಮ ರವರ ಇಬ್ಬರು ತಮ್ಮಂದಿರು ಮತ್ತು ಇಬ್ಬರು ಮಕ್ಕಳು ಬಂದಿದ್ದರು. ಯಾಕೆ ಎಂದು ಕೇಳಿದಕ್ಕೆ ಇವರೆಲ್ಲರೂ ನನ್ನ ಮೇಲೆ ಹಲ್ಲೆ ಮಾಡಿ ಹಾದರಗಿತ್ತಿ, ಕುರುಬ ಜಾತಿಯವರು ನಿಮಗೆ ಚಪ್ಪಲಿಯಿಂದ ಹೊಡೆಯಬೇಕು ಎಂದು ಅವಾಚ್ಯ ಶಬ್ದದಿಂದ ಬೈದಿರುತ್ತಾರೆ ಮತ್ತು ನನ್ನ ಮ್ಕಳಿಗೂ ಹೊಡಿ ಬಡಿ ಮಾಡಿರುತ್ತಾರೆ. ಅವರೇ ನನ್ನ ಮೇಲೆ ಹೊಡೆದಿದ್ದರು ನನ್ನ ವಿರುದ್ಧ ಪ್ರಕರಣ ದಾಖಲಿಸಿ, ಪೋಲಿಸರು ಠಾಣೆಯಲ್ಲಿ ನನ್ನನ್ನು 10 ದಿನ ಇಟ್ಟುಕೊಂಡಿದ್ದರು.

ನಂತರ ನಾನು ಹೊರಗೆ ಬಂದು ಆರೋಪಿತರ ವಿರುದ್ಧ ಪಿರ್ಯಾಧಿಯನ್ನು ಸಲ್ಲಿಸಲು ಹೋದಾಗ ಇಂದು ನಾಳೆ ಎನ್ನುತ್ತಾ ಪೋಲಿಸರು ಪಿರ್ಯಾಧಿಯನ್ನು ದಾಖಲಿಸಿಕೊಂಡಿರುವುದಿಲ್ಲ. ಆದ ಕಾರಣ ಈ ಪಿರ್ಯಾಧಿಯನ್ನು ಸಲ್ಲಿಸಿರುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಸ್ವ ಪ್ರಮಾಣಿಕೃತ ಹೇಳಿಕೆಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.

Complainant is present. Sworn statement is recorded. Sri. IHN advocate prays time for further sworn statement.

Call on 23-09-2025

CJ and JMFC,Savanur

**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರು.</u>**

ಪಿ ಸಿ ಸಂಖ್ಯೆಃ 43/2017

ಸಿಡಬ್ಲ್ಯೂ ಃ 01
ದಿನಾಂಕಃ 03.06.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಮಜೀದಖಾನ ಬಿರಾದಾರ |
| ತಂದೆ/ಗಂಡನ ಹೆಸರು | - ದಿಲೇದಖಾನ |
| ವಯಸ್ಸು | - 62 ವರ್ಷಗಳು |
| ಉದ್ಯೋಗ | - ವ್ಯವಸಾಯ |
| ವಾಸ ಸ್ಥಳ | - ಸವಣೂರು |

**<u>ಸಾಕ್ಷಿಯ ಸ್ವ ಪ್ರಮಾಣೀಕೃತ ಹೇಳಿಕೆಃ</u>**

ಮುಸ್ತಾಕಖಾನ ಬಿರಾದಾರ ಇವರು ನಮಗೆ ಅಸಲುದಾವೆ ನಂ.118/2010 ನ್ನು ಮರಳಿ ಪಡೆಯಬೇಕು ಇಲ್ಲದಿದ್ದರೆ ಗುಂಡಾಗಳನ್ನು ಹಚ್ಚಿ ಕೊಲೆ ಮಾಡಿಸುತ್ತೇನೆ ಅಂತಾ ಬೆದರಿಸುತ್ತಾನೆ. ಅಸಲು ದಾವೆನಂ.71/1984 ರ ಮೂಲಕ ನವಾಜಖಾತು ಇವರ ಆಸ್ತಿಯನ್ನು ಕೊರ್ಟನಿಂದ ವಾರಸಾ ಮಾಡಿಸಿಕೊಂಡಿರುತ್ತಾನೆ. ವಾರಸುದಾರ ಅವರ ತಾಯಿ ಸಾಹೀಬಿ ಇದ್ದಾಗಲೂ ಸಹ ಆಸ್ತಿಯನ್ನು ತನ್ನ ಹೆಂಡತಿ ಹೆಸರಿನಲ್ಲಿ ಮಾಡಿಸಿರುತ್ತಾನೆ. ನಾವು ವಾರಸಾ ಇದ್ದರೂ ಸಹ ನಮಗೆ ಆಸ್ತಿ ಕೊಡದೇ ಸದರಿ ದಾವೆಯಲ್ಲಿ ಕಕ್ಷಿಗಾರರನ್ನಾಗಿ ಮಾಡದೇ ಮೋಸ ಮಾಡಿರುತ್ತಾನೆ. ನಮಗೆ ಆಸ್ತಿ ಸಿಗದ ಹಾಗೆ ಮಾಡುತ್ತೇನೆ ಅಂತಾ ತನ್ನ ಹತ್ತಿರ ಅಧಿಕಾರ ಇದೆ ಅಂತಾ, ನನಗೆ ಆಸ್ತಿ ಕೊಡುವುದಿಲ್ಲ ಅಂತಾ ಬೆದರಿಸಿರುತ್ತಾನೆ. ಆತನಿಂದ ನಮಗೆ ಜೀವದ ಬೆದರಿಕೆ ಇರುತ್ತದೆ. ಆದ್ದರಿಂದ ಆತನ ವಿರುದ್ದ ಕಾನೂನು ಕ್ರಮ ತೆಗೆದುಕೊಂಡು ನ್ಯಾಯ ಒದಗಿಸಬೇಕು ಅಂತಾ ಪ್ರಾರ್ಥಿಸುತ್ತೇನೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.